ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 118-121
©IIMRD, Mysuru
IIMRD JOURNALS
www.iimrd.com

# ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಸ್ಥಿತ್ಯಂತರಗಳು

**ಶಿವಾನಂದ ಡಿ. ಇ[1]**

**ಪೀಠಿಕೆ:**

ಭೂಮಿಯ ಮೇಲೆ ಬದುಕುಳಿದಿರುವ ಪ್ರತಿಯೊಂದು ಜೀವಿಯೂ ತನ್ನದೇ ಸಂಸ್ಕೃತಿಯನ್ನು ರೂಢಿಸಿಕೊಂಡಿವೆ. ಹಾಗಾಗಿ ಸಂಸ್ಕೃತಿ ಎನ್ನುವುದು ಎಲ್ಲರಿಗೂ ಸಾಮಾನ್ಯವಾಗಿರುವಂತಹದ್ದು ಸಂಸ್ಕೃತಿ ಇಲ್ಲದೇ ಸಮಾಜವಿಲ್ಲ, ಸಮಾಜವಿಲ್ಲದೇ ಸಂಸ್ಕೃತಿ ಇಲ್ಲ ಎನ್ನುವುದು ಸತ್ಯದ ಮಾತು. ಸಂಸ್ಕೃತಿಯೆಂಬುದು ಚಲನಶೀಲತೆಯ ಗುಣವನ್ನು ಹೊಂದಿದ್ದು ಅದು ಸದಾ ಹರಿಯುವ ನೀರಿದ್ದಂತೆ. ಇದು ಪ್ರಾದೇಶಿಕವಾಗಿ, ಭೌಗೋಳಿಕವಾಗಿ ಭಿನ್ನವಾಗಿರುತ್ತದೆ. ಅದೇ ರೀತಿಯಾಗಿ ಬುಡಕಟ್ಟು ಸಂಸ್ಕೃತಿಯೂ ಕೂಡಾ ಭಿನ್ನತೆಯಿಂದ ಕೂಡಿದೆ. ಅದು ಆಚರಣೆಯಲ್ಲಾಗಿರಬಹುದು ರೂಢಿ ಸಂಪ್ರದಾಯ ಉಡುಗೆ ತೊಡುಗೆಗಳಲ್ಲಾದರೂ ಆಗಿರಬಹುದು. ಹಾಗಾಗಿ ಇದಕ್ಕೂ ಮೊದಲು ಬುಡಕಟ್ಟು ಎಂಬುದರ ಅರ್ಥತಿಳಿದುಕೊಳ್ಳುವುದು ಸೂಕ್ತ. ಬುಡಕಟ್ಟು ಎಂದರೆ ನಿರ್ಧಿಷ್ಟ ಪ್ರದೇಶದಲ್ಲಿ ವಾಸಿಸುತ್ತಿದ್ದು, ನಿರ್ಧಿಷ್ಟ ಭಾಷೆಯೊಂದನ್ನು ಮಾತಾಡುವ ಒಬ್ಬ ಮೂಲ ಪುರುಷ, ಒಂದು ಆದಿದೈವ, ಸರ್ವಾನುಮತದ ಒಬ್ಬ ಮುಖ್ಯಸ್ಥನನ್ನು ಪಡೆದಿರುವ ನಿರ್ಧಿಷ್ಟವಾದ ನೈಸರ್ಗಿಕ ಕಾನೂನು ಕಟ್ಟಳೆಗಳನ್ನು ಪಾಲಿಸುವ ಮತ್ತು ಸಮಾನ ಸಂಸ್ಕೃತಿಯನ್ನು ಸುಸಂಘಟಿತ ಸಾಮಾಜಿಕ ವ್ಯವಸ್ಥೆಯನ್ನು ಏರ್ಪಡಿಸಿಕೊಂಡಿರುವ ಒಂದು ಸಾಮಾಜಿಕ ಗುಂಪು ಬುಡಕಟ್ಟು ಎನಿಸಿಕೊಳ್ಳುತ್ತದೆ.

ಸರಳವಾಗಿ ಹೇಳಬೇಕೆಂದರೆ ಒಂದು ಸಣ್ಣದಾದ, ಸ್ವತಂತ್ರವಾದ ಹಾಗೂ ಅನ್ಯೋನ್ಯವಾಗಿ ಒಂದುಗೂಡುವ ಜನಸಮೂಹ, ಇದು ರಕ್ತ ಸಂಬಂಧದ ಮುಖೇನ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಂದ ಬಂಧಿಯಾಗಿರುತ್ತದೆ. ಅದರ ರಾಜಕೀಯ ವ್ಯವಸ್ಥೆ ವ್ಯಾಪಕವಾದ ತಳಹದಿಯ ಮೇಲೆ ನಿಂತಿರುತ್ತದೆ. ಅಲ್ಲದೆ ಪ್ರಾಚೀನ ಪ್ರಜಾಪ್ರಭುತ್ವ ಕ್ರಮವನ್ನು ಆಧರಿಸುತ್ತದೆ" ಎಂಬುದಾಗಿ ಖ್ಯಾತ ಮಾನವಶಾಸ್ತ್ರಜ್ಞ **ಎ.ಎಲ್ ಕ್ರೋಬೇರ್** ಅಭಿಪ್ರಾಯಪಟ್ಟಿದ್ದಾರೆ.

ಈ ನಿಟ್ಟಿನಲ್ಲಿ ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿವೆ. ಬುಡಕಟ್ಟು ಸಂಸ್ಕೃತಿಯು ವಿವಿಧ ಮುಖಗಳನ್ನು ಹೊಂದಿದೆ. ಸಾಂಸ್ಕೃತಿಕ ಕಲೆಗಳ ತವರೂರು ಮತ್ತು ಗಡಿಜಿಲ್ಲೆ ಎಂದೇ ಖ್ಯಾತಿ ಪಡೆದಿರುವ ಚಾಮರಾಜನಗರ ಜಿಲ್ಲೆಯೂ ಕೂಡಾ ಆಧುನಿಕತೆಯ ಅಭಿವೃದ್ಧಿಯಿಂದಾಗಿ ಇಂದು ಬದಲಾವಣೆಗೊಂಡಿದೆ. ಹಾಗೆಯೇ ಇಲ್ಲಿನ ಜನಜೀವನ ಕೂಡಾ ಬದಲಾಗುತ್ತಿದೆ. ಅದು ಶಿಕ್ಷಣದಲ್ಲಾಗಿರಬಹುದು, ಆರ್ಥಿಕ, ರಾಜಕೀಯ ಸಾಮಾಜಿಕವಾಗಿರಬಹುದು. ಮಾನವ

---

[1] ***ಜಾನಪದ ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–06***

ತನ್ನ ಹುಟ್ಟಿನಿಂದ ಇಡಿದು ಸಾವಿನವರೆಗೂ ದಿನೇ ದಿನೇ ಒಂದಲ್ಲಾ ಒಂದು ರೀತಿ ಬದಲಾವಣೆಗೆ ಒಳಗಾಗುತ್ತಾನೆ. Change is Permanent ಎಂಬ ಮಾತಿನಂತೆ ಬದಲಾವಣೆ ಎಂಬುದು ಶಾಶ್ವತವಾದದ್ದು, ನೈಸರ್ಗಿಕವಾದುದಾಗಿದೆ. ವಿಜ್ಞಾನ ಬೆಳೆದಂತೆಲ್ಲಾ ಪೂರಕವೂ, ಮಾರಕವೂ ಆಗಿ ಪರಿಣಮಿಸುತ್ತಿದೆ. ಮನುಷ್ಯ ತನ್ನ ಜೀವನವನ್ನು ಸವೆಸುವುದಕ್ಕಾಗಿ ಅವುಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗಿದೆ. ಹಾಗಾಗಿ ಅವನು ತಾನು ಹುಟ್ಟಿ ಬೆಳೆದ ಸಮುದಾಯದ ಸಂಸ್ಕೃತಿಯೊಳಗೆ ಕಾಲದ ಅನಿವಾರ್ಯತೆ ಪರಿಣಾಮವಾಗಿ ಅಲ್ಲಿ ಉಂಟಾಗುವ ಏರುಪೇರುಗಳಿಂದ ಅವನು ವೇಗವಾಗಲ್ಲದಿದ್ದರೂ ನಿಧಾನಗತಿಯಲ್ಲಿ ಬದಲಾಗುತ್ತಿರುವ, ಕಾಲಮಾನಕ್ಕೆ ತಕ್ಕಂತೆ ಹೊಂದಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಹೀಗೆ ಕಾಲಕಳೆದಂತೆ ತನ್ನ ಮೂಲ ಸಂಸ್ಕೃತಿಯನ್ನು ಬಿಟ್ಟು ಬದಲಾವಣೆಯತ್ತಾ ಮುಖ ಮಾಡುತ್ತಿದ್ದಾನೆ. ಹೀಗೆ ಚಾಮರಾಜನಗರ ಜಿಲ್ಲೆಯಲ್ಲಿ ಕಂಡುಬರುವ ಬುಡಕಟ್ಟು ಸಮುದಾಯಗಳಾದ ಸೋಲಿಗ, ಜೇನುಕುರುಬ, ಬೆಟ್ಟಕುರುಬ ಮುಂತಾದ ಸಮುದಾಯಗಳು ಇದಕ್ಕೆ ಹೊರತಾಗಿಲ್ಲ. ಅನಾದಿ ಕಾಲದಿಂದಲೂ ಬುಡಕಟ್ಟು ಸಮುದಾಯಗಳು ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆ ಅನನ್ಯತೆಯನ್ನು ಉಳಿಸಿಕೊಂಡು ಬಂದಿವೆ. ತೀವ್ರ ತರವಾದ ಅವಮಾನ, ಹಸಿವು ಕೆಲವು ಗಂಭೀರ ಸ್ವರೂಪದ ರೋಗರುಜಿನಗಳಿಗೆ ತುತ್ತಾಗಿರುವ ಬುಡಕಟ್ಟು ಜನತೆ ನಿಜವಾಗಿಯೂ ದಟ್ಟ ದಾರಿದ್ರ್ಯದ ಜೀವನವನ್ನೇ ಸಾಗಿಸುತ್ತಿವೆ ಎಂಬುದು ದುರದೃಷ್ಟಕರ. ಆದರೆ ಇಂದು ತೀವ್ರಗತಿಯಲ್ಲಿ ಔದ್ಯೋಗಿಕರಣ ಆಧುನೀಕರಣ ನಮ್ಮ ದೇಶದಲ್ಲಂತೂ ಅರಣ್ಯ ಪ್ರದೇಶವನ್ನು ಕಿರಿದಾಗಿಸುತ್ತಾ ಹೋಯಿತು. ಇದು ಬುಡಕಟ್ಟು ಜನರಿಗೆ ತಮ್ಮ ಜೀವನೋಪಾಯಕ್ಕೆ ಅನಾನುಕೂಲವಾಯಿತು. ಕಾಡಿನಿಂದ ಒಕ್ಕಲೆಬ್ಬಿಸುವ ಪ್ರಯತ್ನದಿಂದ ಇವರು ನಾಡಿಗೆ ಬರುವಂತಹ ವಾತಾವರಣ ಉಂಟಾಯಿತು. ಈ ಭಾಗದಲ್ಲಿ ಅರಣ್ಯ ಸಂಪನ್ಮೂಲಗಳ ವ್ಯಾಪಕ ಶೋಷಣೆಯೇ ಆರಂಭವಾಗಿದೆ. ಇದರಿಂದಾಗಿ ಬುಡಕಟ್ಟು ಸಮುದಾಯಗಳು ಅನೇಕ ರೀತಿಯ ನ್ಯೂನ್ಯತೆಗಳು ಮತ್ತು ಕೊರತೆಗಳನ್ನು ನಿರಂತರವಾಗಿ ಅನುಭವಿಸಬೇಕಾಗಿ ಬಂತು. ಹಾಗಾಗಿ ಚಾಮರಾಜನಗರ ಜಿಲ್ಲೆಯ ಗಡಿಭಾಗದಲ್ಲಿ ಕಂಡುಬರುವ ಸೋಲಿಗರು, ಜೇನುಕುರುಬರು, ಬೆಟ್ಟದ ಕುರುಬರು, ಕಾಡು ಕುರುಬರು, ಇಂದಿನ ರೀತಿಯ ನಾಗರಿಕ ಪ್ರಪಂಚದಿಂದ ದೂರವೇ ಉಳಿದು ತಮ್ಮದೇ ಆದ ಜೀವನ ವಿಧಾನವನ್ನು ರೂಪಿಸಿಕೊಂಡು ಭಿನ್ನಸಂಸ್ಕೃತಿಯನ್ನು ಬೆಳೆಸಿ ಕೊಂಡು ಬಂದಿದ್ದಾರೆ. ಇವರು ಇತರ ಮಾನವ ಸಮುದಾಯಗಳಷ್ಟೇ ಅಥವಾ ಇದಕ್ಕೂ ಮಿಗಿಲಾಗಿ ಸ್ವಾಭಿಮಾನ ಮತ್ತು ಆತ್ಮಶಕ್ತಿಯನ್ನು ಗಳಿಸಿ ಕೊಂಡವರಾಗಿದ್ದಾರೆ. ಹಾಗಾಗಿ ಬೆಟ್ಟಗುಡ್ಡಗಳಲ್ಲಿ ನೆಲೆಸಿರುವ ಈ ಬುಡಕಟ್ಟು ಜನರ ಸಂಸ್ಕೃತಿ ಅನನ್ಯವಾದದ್ದು.

ಈ ಸಮುದಾಯಗಳು ಬದಲಾದ ಪರಿಸ್ಥಿತಿಯಲ್ಲಿ ತಮ್ಮ ಪರಂಪರೆಯಿಂದ ಬಂದಿರುವ ಪರಂಪರಾಗತ ಕಸುಬಿನೊಡನೆ ಬೇರೆ ಬೇರೆ ಹವ್ಯಾಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವರ್ಗಾವಣೆ ಬೇಸಾಯ, ಬೇಟೆ, ಜೇನು ಸಾಕಾಣಿಕೆ, ಬುಟ್ಟಿ ಹೆಣಿಯುವಿಕೆ, ಬಿದಿರು ಕೆಲಸದ ಜೊತೆಗೆ ಬಹುಪಾಲು ಇವರು ಕೃಷಿಯನ್ನೇ ವೃತಿಯನ್ನಾಗಿ ಅವಲಂಬಿಸಿದ್ದಾರೆ. ಕೆಲವರು ನಗರದಿಂದ ಬುಡಕಟ್ಟು ಸಮುದಾಯಗಳತ್ತ ಮುಖಮಾಡಿ ಅವರ ಭೂಮಿಯನ್ನೇ ಪಡೆದು ಅವರಿಗೇ ಕೂಲಿ ನೀಡಿ ಅದರಲ್ಲಿ ಮಾಲೀಕರ ಅಗತ್ಯತೆಗೆ ಬೇಕಾದ ಬೆಳೆಯನ್ನು ಬೆಳೆಯುವಂತೆ ಪುಸಲಾಯಿಸುತ್ತಿದ್ದಾರೆ. ಕೆಲವರಂತೂ ತಮ್ಮ ಮೂಲಕಸುಬುಗಳನ್ನು ಬಿಟ್ಟು ನಗರದತ್ತ ದಾವಿಸಿರುವುದರಿಂದ ವಲಸೆಯ ಪ್ರಮಾಣವು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಅವರ ಆರ್ಥಿಕ ಜೀವನವೂ ಬದಲಾಗಿದೆ. ತಾವು ಬೆಳೆದ ತರಕಾರಿ ಹಣ್ಣುಹಂಪಲು, ತಾವೇ ಹೆಣೆದಂತಹ ಗೃಹಪಯೋಗಿ

ಚಾಪೆಬುಟ್ಟಿ ಮುಂತಾದವುಗಳನ್ನು ತಲೆಯ ಮೇಲೆ ಹೊತ್ತು ಕೊಂಡು ಕಾಲು ನಡಿಗೆಯಲ್ಲೇ ಕಾಡನ್ನು ದಾಟಿ ಹಳ್ಳಿಯ ಸಂತೆಗೆ ಹೋಗುತ್ತಾರೆ. ಅಲ್ಲಿ ಅವುಗಳನ್ನು ಮಾರಿ ಬಂದ ಹಣಕಾಸಿನಿಂದ ತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆ. ಈ ಮೊದಲು ವಸ್ತುವಿನಿಮಯ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಆದರೆ ಈಗ ಅದು ಸಂಪೂರ್ಣವಾಗಿ ಬಳಕೆಯಲ್ಲಿಲ್ಲ. ಸೋಲಿಗರು ನೆರೆಹೊರೆಯ ಹಳ್ಳಿಗಳಿಗೆ ಹೋಗಿ ರೈತರ ಹೊಲಗಳಲ್ಲಿ ದಿನಗೂಲಿಗಾಗಿ ದುಡಿಯುತ್ತಿದ್ದಾರೆ. ತಾವು ಇರುವ ಹಾಡಿಗಳಲ್ಲೇ, ಕಾಲೋನಿಗಳಲ್ಲೇ ದಿನಬಳಕೆಯ ವಸ್ತುಗಳು, ಚಹಾದ ಅಂಗಡಿ, ದಿನಸಿ ಅಂಗಡಿಗಳನ್ನು ತೆರೆದಿದ್ದಾರೆ. ಅಲ್ಲದೆ ಅವರ ಉಡುಪಿನಲ್ಲೂ ತೀರ ಬದಲಾವಣೆಯಾಗಿರುವುದನ್ನು ನಾವು ಕಾಣಬಹುದು

ಇಲ್ಲಿನ ಬುಡಕಟ್ಟಿನವರು ಕೈಮಗ್ಗದ ಬಟ್ಟೆಗಳಿಗೆ ಬದಲಾಗಿ ಆಧುನಿಕ ಗಾರ್ಮೆಂಟ್ಸ್ ಬಟ್ಟೆಗಳನ್ನು ಧರಿಸುತ್ತಿದ್ದಾರೆ. ಹೆಂಗಸರು ನೈಟಿ, ಸೀರೆ ಗಂಡಸರು ಧೋತಿ, ಪಂಚೆ ಯುವಕರು ಜೀನ್ಸ್ ಪ್ಯಾಂಟ್‌ಗಳನ್ನು ಧರಿಸುತ್ತಿರುವುದು ಇಂದು ಸರ್ವೇಸಾಮಾನ್ಯವಾಗಿದೆ. ಕೇವಲ ರೇಡಿಯೋಗಳನ್ನು ಇಟ್ಟುಕೊಂಡಿದ್ದ ಸಮುದಾಯ ದೂರದರ್ಶನ ಅಂದರೆ ಟಿ.ವಿ.ಗಳನ್ನು ಒಳಗೊಂಡಿದ್ದು ಸುತ್ತಮುತ್ತಲಿನ ಹಾಡಿಗಳು ವಿದ್ಯುದೀಕರಣಗೊಂಡಿವೆ. ಮುಂದುವರೆದು ಮಹಿಳೆಯರು ನಗರವಾಸಿಗಳ ತರಹ ಗಾಜಿನ ಬಳೆಗಳು, ಸಾಬೂನು, ಬಾಚಣಿಗೆ, ಚಪ್ಪಲಿಗಳನ್ನು ಧರಿಸುತ್ತಿದ್ದಾರೆ. ಕ್ಯಾಮೆರಾ, ಸೈಕಲ್, ಸ್ಕೂಟರ್, ಬೈಕ್‌ಗಳನ್ನು ಹೊಂದಿದ್ದಾರೆ. ಈ ಭಾಗದ ಹಾಡಿಗಳಿಗೆ ಸರ್ಕಾರಿ ಬಸ್ ಸೌಲಭ್ಯ ಕೂಡಾ ಇದೆ.

ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮೊದಲಿಗಿಂತಲೂ ಇಂದು ಸುಧಾರಿಸಿದ್ದು ಗಿರಿಜನ ಆಶ್ರಮ ಶಾಲೆಗಳು ತಲೆ ಎತ್ತಿವೆ. ಅಲ್ಲದೆ ನಗರ ಪ್ರದೇಶಗಳಿಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಬರುತ್ತಿದ್ದು ಪದವಿ ಶಿಕ್ಷಣವನ್ನು ಪೂರೈಸಿದ್ದಾರೆ. ಇಲ್ಲಿ ವಿದ್ಯಾವಂತ ನಿರುದ್ಯೋಗ ಕಂಡುಬಂದರೂ ಕೂಡಾ ಕೆಲವರು ವಿಜ್ಞಾನ ವಿಷಯದಲ್ಲಿ ಪದವಿ ಮುಗಿಸಿ ಆರೋಗ್ಯ ಕೇಂದ್ರಗಳಲ್ಲಿ ಶುಶ್ರೂಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ಕಂಡುಬರುವ ಕೆಲವು ಸಮುದಾಯಗಳು ಕ್ರೈಸ್ತಮಿಷನರಿಗಳ ಪ್ರಾಬಲ್ಯದಿಂದ ಮತಾಂತರ ಹೊಂದಿ ಕ್ರೈಸ್ತ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣವನ್ನು ಪಡೆದು ಅಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಬುಡಕಟ್ಟು ಜನರು ತಮ್ಮ ಕಲೆಯ ಪ್ರಚಾರಕ್ಕೆ ಸಂಬಂಧಪಟ್ಟಂತೆ ಹಳ್ಳಿಯಿಂದ ನಗರದತ್ತ ಧಾವಿಸಿ ಆಕಾಶವಾಣಿ ದೂರದರ್ಶನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸುತ್ತಾ ಬರುತ್ತಿದ್ದಾರೆ. ಕೆಲವರು ಕಾಡಿನಿಂದ ಹಳ್ಳಿಗೆ ಮದುವೆಯಾಗಿರುವುದುಂಟು.

ಬುಡಕಟ್ಟು ಸಮುದಾಯಗಳು ಕೃಷಿ ಕಾರ್ಯಗಳಿಗೆ ಸಂಬಂಧಿಸಿದಂತೆ ರಾಸಾಯನಿಕ ಗೊಬ್ಬರಗಳ ಬಳಕೆ ಮತ್ತು ಉತ್ತಮ ತಳಿಯ ಭಿತ್ತನೆ ಬೀಜಗಳನ್ನು ಬಳಸುತ್ತಿದ್ದಾರೆ. ಸದಾ ಒಂದಲ್ಲ ಒಂದು ಕೆಲಸವನ್ನು ಮಾಡುವುದರಿಂದ ಸಾಲದ ಮಟ್ಟವು ಕ್ಷೀಣಿಸಿದೆ. ತಾಂತ್ರಿಕಜ್ಞಾನದ ಕೊರತೆ ಎದ್ದು ಕಾಣುತ್ತದೆ. ಒಳಪಂಗಡ ಅಂದರೆ ತಮ್ಮ ಬುಡಕಟ್ಟುಗಳೊಳಗೆ ವಿವಾಹ ಸಂಬಂಧಗಳು ಏರ್ಪಡುತ್ತಿವೆ. ಸಮೂಹ ಮಾಧ್ಯಮಗಳ ಸಂಪರ್ಕವೂ ಏರ್ಪಟ್ಟಿದೆ. ಬುಡಕಟ್ಟು ಹಾಡಿಗಳಿಗೆ ಸಂಪರ್ಕ ಕಲ್ಪಿಸಲು ರಸ್ತೆ ವ್ಯವಸ್ಥೆಯೂ ಸುಧಾರಿಸಿದ್ದು, ಬ್ಯಾಂಕಿಂಗ್ ಪದ್ಧತಿಯೂ ಕೂಡಾ ಕಾಲಿಟ್ಟಿದೆ. ಶಾಲೆ ಅಂಗನವಾಡಿ, ಕಟ್ಟಡಗಳನ್ನು ನಾವು ಕಾಣಬಹುದಾಗಿದೆ. ಅಧ್ಯಯನಗಳ ದೃಷ್ಟಿಯಿಂದ ನಾಗರಿಕ, ಸಂಶೋಧಕರ ಸಂಪರ್ಕದಿಂದ ಸುಧಾರಿಸುತ್ತಿದೆ. ನಾಚಿಕೆ, ಭಯದ

ವಾತಾವರಣ ನಿರ್ಮಾಮವಾಗಿದ್ದು ಸಂಶೋಧಕರು ಅಲ್ಲಿಗೆ ತೆರಳಿ ವಿಷಯಕ್ಕೆ ಪೂರಿತವಾದ ಪ್ರಶ್ನೆಗಳನ್ನು ಕೇಳಿದರೆ ಉತ್ತರಿಸಲು ಬುಡಕಟ್ಟು ಜನರು ಪ್ರಯತ್ನಿಸುತ್ತಾರೆ. ಇವರು ಭಾಷೆಯಲ್ಲಿ ಕೂಡಾ ಶಿಷ್ಟತೆ ಹೊಂದಿದ್ದು ತಮಿಳು, ಮಲಯಾಳಂ ಕನ್ನಡದಲ್ಲಿಯೂ ಕೂಡಾ ವ್ಯವಹರಿಸುತ್ತಾರೆ. ಬಂಡೀಪುರದ ಭಾಗಗಳಲ್ಲಿ ಬುಡಕಟ್ಟು ಹಾಡಿಗಳತ್ತ ಪ್ರವಾಸೋದ್ಯಮ ಚಿಂತನೆ ನಡೆದಿದ್ದು, World Vision ಎಂಬ ಸರ್ಕಾರೇತರ ಸಂಸ್ಥೆ ಹಾಗೂ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಬಿಳಿಗಿರಿರಂಗನಬೆಟ್ಟ ಅವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಅರಣ್ಯ ಇಲಾಖೆಗಳಲ್ಲಿ ಮಾವುತ ತರಬೇತಿ ವೃತ್ತಿ, ಪ್ರಾಣಿಗಳ ಗಣತಿ, ಫೈರ್‌ಮ್ಯಾನ್ ಕೆಲಸ ಮುಂತಾದ ಕಾರ್ಯಗಳಲ್ಲಿ ಪಾಲ್ಗೊಂಡು ಜೀವನ ನಡೆಸುತ್ತಿದ್ದಾರೆ. ಮಂಗಲ ಗ್ರಾಮ ಸೇರಿದಂತೆ ಅಲ್ಲಿ ಕಂಡುಬರುವ ಕಣಿಯನಪುರ ಕಾಲೋನಿಯ ಕೆಲ ಬುಡಕಟ್ಟು ಯುವಕರು ಪದವೀಧರರಾಗಿದ್ದು ಮೈಸೂರು ನಗರದಲ್ಲಿ ಖಾಸಗಿ ಶಾಲೆಗಳಲ್ಲಿ ದೈಹಿಕ ಶಿಕ್ಷಕರಾಗಿ ಮತ್ತು ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಕೂಡಾ ಸ್ಥಿತ್ಯಂತರ ವಿಷಯವಾಗಿದೆ.

ಹೀಗೆ ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳೂ ಜಾಗತೀಕರಣದ ಹೊಡೆತಕ್ಕೆ ಸಿಲುಕಿ ಮೂಲ ಸಂಸ್ಕೃತಿಯಿಂದ ನಗರ ಸಂಸ್ಕೃತಿಯೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಆಧುನೀಕರಣವು ಮನುಷ್ಯನನ್ನು ಆಕರ್ಷಿಸುತ್ತಾ ಬಂದಿದ್ದು ಅವನು ಒಂದಲ್ಲಾ ಒಂದು ರೀತಿಯಾಗಿ ಇದರ ಹೊಡೆತಕ್ಕೆ ಸಿಲುಕಿ ಸ್ಥಿತ್ಯಂತರ ಹೊಂದುತ್ತಿರುವುದನ್ನು ಕಾಣಬಹುದಾಗಿದೆ ಈ ನಿಟ್ಟಿನಲ್ಲಿ ಕಾಲ ಕಳೆದಂತೆ ರೂಢಿ–ಸಂಪ್ರದಾಯ, ಆಚಾರ–ವಿಚಾರಗಳಲ್ಲೂ ಹಂತ ಹಂತವಾಗಿ ಬದಲಾಗುತ್ತಿರುವ ಬುಡಕಟ್ಟು ಸಮುದಾಯವನ್ನು ನಾವು ಈ ಭಾಗದಲ್ಲಿ ಕಾಣಬಹುದಾಗಿದೆ ಹಾಗಾಗಿ ಬದಲಾವಣೆಯೇ ಪ್ರಕೃತಿಯ ನಿಯಮ ಎಂಬ ಮಾತು ಜಾನಪದೀಯ ನೆಲೆಗಟ್ಟಿನಲ್ಲಿ ಸಾಬೀತಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ, ಜಾನಪದ ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ನೃಪತುಂಗ ರಸ್ತೆ ಬೆಂಗಳೂರು–2
- ಮಧು ಗುಂಡ್ಲುಪೇಟೆ, ಅನ್ನಪೂರ್ಣ ಎಂ, ಬಿ. ಆರ್.ಮಂಜುನಾಥ ಬೆಂಡರವಾಡಿ (2017), ಕರ್ನಾಟಕ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ, ಪ್ರಜಾವಿಕಾಸ ಪ್ರಕಾಶನ, ಮೈಸೂರು.
- ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
- ಆರ್.ರಾಮಕೃಷ್ಣ, ಸಾಂಸ್ಕೃತಿಕ ಮಾನವಶಾಸ್ತ್ರ, ಸುನಿಲ್ ಪ್ರಕಾಶನ, ಮೈಸೂರು–09